2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5027/2022**

ದಿಃ25.11.2024
ಚಾಸಾ-2 ಪ್ರಾಸಾ-2

ಹೆಸರು ಃ ರಾಘವೇಂದ್ರ

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
**ಪಾಟೀ ಸವಾಲುಃ ಶ್ರೀ ಎಮ್ ಎಮ್ ಆರೋಪಿ ಪರ ವಕೀಲರು**

ನಾನು ಎಮ್ ಬಿ ಎ ಪದವಿದರ. ಸುಮಾರು 6 ವರ್ಷಗಳ ಹಿಂದೆ ನನ್ನ ವಿವಾಹವಾಗಿದ್ದು, ಅಲ್ಲಿಂದ ನಾನು ಸಂಸಾರದೊಂದಿಗೆ ಬೆಂಗಳೂರುನಲ್ಲಿ ವಾಸವಾಗಿರುತ್ತೇನೆ. ನಾನು ಕೆಲಸ ಮಾಡುವ ಕಂಪನಿಯಲ್ಲಿಪ್ರತಿ ಶನಿವಾರ ಮತ್ತು ಭಾನುವಾರ ರಜಾದಿನವಾಗಿರುತ್ತೇದೆ. 5 ನೇ ಆರೋಪಿಯ ಮುಖ ಪರಿಚಯವಿರುತ್ತದೆ. 6 ನೇ ಆರೋಪಿಯನ್ನು ನಾನು ನೋಡಿರುವುದಿಲ್ಲ. ಆರೋಪಿ ಸಂಖ್ಯೆ 1 ರಿಂದ 4 ರವರು ನನಗೆ ಪರಿಚಯವಿರುವುದಿಲ್ಲ. ನಾನು ಚಾಸಾ-1 ರವರೊಂದಿಗೆ ಸಾತನೂರು ಪೋಲಿಸ್ ಠಾಣೆಗೆ ಎಂದಿಗೂ ಹೋಗಿರುವುದಿಲ್ಲ. ಘಟನೆ ನಡೆಯುತೆಂದೆ ಹೇಳಲಾದ ಸಮಯದಲ್ಲಿ 6 ಜನ ಆರೋಪಿತರ ಜೊತೆಯಲ್ಲಿ ಸುಮಾರು 15 ಜನ ಬೇರಯವರು ಘಟನ ಸಮಯದಲ್ಲಿ ಹಾಜರಿದ್ದರು. ಅವರುಗಳ ಹೆಸರು ನನಗೆ ತಿಳಿದಿರುವುದಿಲ್ಲ. ಘಟನೆ ನಡೆಯುತೆಂದು ಹೇಳಲಾದ ಸಮಯದಲ್ಲಿ ನಮ್ಮ ಮನೆ ಮುಂದೆ ಎಷ್ಟು ವಾಹನಗಳು ಬಂದಿದವು ಎಂಬ ಪ್ರಶ್ನೆಗೆ ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 6 ಜನ ಆರೋಪಿತರು ಇನೋವಾ ವಾಹನದಲ್ಲಿ ಬಂದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಬೇರೆಯವರು ಯಾವ ವಾಹನದಲ್ಲಿ ಬಂದಿದ್ದರು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿತರು MO ಸಂಖ್ಯೆ 3 ನ್ನು ಯಾವುದರಿಂದ ಓಡೆದರು ಎಂಬುದನ್ನು ನಾನು ನೋಡಿಲ್ಲ. ಚಾಸಾ-1 ರವರ ಮನೆಯ 2 ಗೇಟುಗಳು ದಕ್ಷಿಣ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ಚಾಸಾ-1 ರವರ ಮನೆಯ ಪೂರ್ವ ದಿಕ್ಕಿನಲ್ಲಿ ಕಾಂಪೌಂಡ್

ಇರುತ್ತದೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ 6 ಜನ ಆರೋಪಿತರೊಂದಿಗೆ 15 ಜನರ ನಮ್ಮ ಮನೆಗೆ ನುಗ್ಗಿರುತ್ತಾರೆ. ಆ ಸಮಯದಲ್ಲಿ ಆರೋಪಿತರು ಹಾಗೂ ಉಳಿದ 15 ಜನರು ಚಾಸಾ-1 ರವರನ್ನು ಕುರಿತು ಚಾಸಾ-4 ರವರನ್ನು ಹೊರ ಕಳುಹಿಸಲು ಸೂಚಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-4 ರವರು ಮನೆಯ ಒಳಗೆ ಇದ್ದರು. ಆ ಸಮಯದಲ್ಲಿ ಆರೋಪಿತರೊಂದಿಗೆ ಬಂದ ಜನರು ಚಾಸಾ-4 ರವರು, 3 ನೇ ಆರೋಪಿಯೊಂದಿಗೆ ವಿವಾಹವಾಗಿರುತ್ತಾರೆ ಎಂದು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರವರು 6 ಜನ ಆರೋಪಿತರಿಗೆ ಹಾಗೂ ಅವರ ಜೊತೆಗೆ ಬಂದ ವ್ಯಕ್ತಿಗಳೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರ ಮನೆಗೆ ನುಗ್ಗಿದ ಸಮಯದಲ್ಲಿ ನಾನು ಚಾಸಾ-1, ಚಾಸಾ-3 ರಿಂದ 7 ರವರು ಮನೆ ಒಳಗೆ ಇದ್ದೇವೆ. ಚಾಸಾ-7 ಮತ್ತು 8 ರವರು ತೋಟದ ಹಳ್ಳಿ ಗ್ರಾಮದ ವಾಸಿಗಳು ಎಂದರೆ ಸರಿ. ಚಾಸಾ-4 ರವರ ಮದುವೆ ನಿಶ್ಚಯವಾದ ಕಾರಣ ಚಾಸಾ-7 ಮತ್ತು 8 ರವರು ಆ ದಿನ ನಮ್ಮ ಮನೆಗೆ ಬಂದಿರುತ್ತಾರೆ. ಚಾಸಾ-3 ರವರು ಕನಕಪುರ ಗ್ರಾಮದ ವಾಸಿ ಎಂದರೆ ಸರಿಯಲ್ಲ. ಚಾಸಾ-4 ರವರ ಮದುವೆಯು ಮದ್ದೂರಿನ ಆಶಿಕ ಎಂಬುವವರೊಂದಿಗೆ ನಿಶ್ಚಯವಾಗಿತ್ತು.

ಚಾಸಾ-1 ಮತ್ತು 4 ರ ವಿರುದ್ದ ಮದುವೆ ಮಾಡಿಕೊಂಡು ಮೋಸ ಮಾಡಿರುತ್ತಾರೆ ಎಂದು ಹೇಳಿ, ಆರೋಪಿತರ ಸಂಖ್ಯೆ 1 ರಿಂದ 3 ರವರು ಸಾತನೂರು ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುವ ವಿಚಾರ ನನಗೆ ತಿಳಿದಿಲ್ಲ. ಸಾತನೂರು ಪೋಲಿಸ್ ನವರು ಇದು ಕೌಟುಂಬಿಕ ವಿಚಾರವಾಗಿರುವುದರಿಂದ ನೀವೇ ಬಗೆಹರಿಸಿಕೊಳ್ಳಿ ಎಂದು ಸಲಹೆ ನೀಡಿದ್ದರಿಂದ ಆರೋಪಿತರು ಮತ್ತು ಅವರೊಂದಿಗೆ ಶಿವಶಕ್ತಿ ಮಹಿಳಾ ಸಂಘದವರು ಚಾಸಾ-1 ರವರ ಮನೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸಾಕ್ಷ್ಯ ಸಂಗ್ರಹ ಮಾಡಲು ಚಾಸಾ-3

ರಿಂದ 8 ರವರನ್ನು ಮನೆಗೆ ಕರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ 5 ನೇ ಆರೋಪಿತಯು ಚಾಕುವಿನಿಂದ ತಲೆಯ ಬಲಭಾಗಕ್ಕೆ ಹಲ್ಲೆ ಮಾಡಿರುತ್ತಾನೆ. 4 ನೇ ಆರೋಪಿತಯು ಚಾಸಾ-3 ರವರಿಗೆ ತಲೆಯ ಹಿಂಭಾಗಕ್ಕೆ ಕಬ್ಬಿಣದ ರಾಡಿನಿಂದ, ತೊಳುಬೆರಳು ಮತ್ತು ಹೈಬೆರಳಿಗೆ ಕಲ್ಲಿನಿಂದ ಹಲ್ಲೆ ಮಾಡುತ್ತಾರೆ. ಘಟನೆಯು ಮಧ್ಯಾಹ್ನ 1.30 ರ ಸಮಯದಿಂದ 2.30 ರ ಸಮಯದವರೆಗೂ ನಡೆದಿರುತ್ತದೆ. ಘಟನೆ ನಡೆದಿತು ಎಂದು ಹೇಳಲಾದ ಸಮಯದಲ್ಲಿ ನನ್ನ ಹೆಂಡತಿ ಚಾಸಾ-6 ರವರು ತುಂಬು ಗರ್ಬಿಣಿಯಾಗಿದ್ದರು ಎಂದರೆ ಸರಿ. ಘಟನಾ ಸಮಯದಲ್ಲಿ ಧರಿಸಿದ್ದ ನನ್ನ ಟಿ ಶರ್ಟ್ ಗೆ ಎದೆಯ ಬಲಭಾಗ ಹಾಗೂ ಹೊಟ್ಟೆಯ ಭಾಗದಲ್ಲಿ ರಕ್ತದ ಕಲೆಯಾಗಿತ್ತು. ಪಾಟೇಲ್ ಕಾಳಿರೇಗೌಡನ ದೊಡ್ಡಿ ಗ್ರಾಮದಿಂದ ಸಾತನೂರು ಪ್ರಾಥಮಿಕ ಆರೋಗ್ಯ ಕೇಂದ್ರವು ಸುಮಾರು 4 ಕೀ.ಮೀ ದೂರವಿರುತ್ತದೆ. ಸಾತನೂರು ಪೋಲಿಸ್ ಠಾಣೆ ಸುಮಾರ 3 ಕೀ. ಇರುತ್ತದೆ. ಘಟನಾ ಸಮಯದಲ್ಲಿ ಚಾಸಾ-3 ರವರು ಧರಿಸಿದ್ದ ಬನಿಯನ್ ಮುಂಭಾಗ ಮತ್ತು ಹಿಂಭಾಗದಲ್ಲಿ ರಕ್ತದ ಕಲೆಯಾಗಿರುತ್ತದೆ. ಈ ಬಗ್ಗೆ ನಾನು ಹಾಗೂ ಚಾಸಾ-3 ರವರು ಸಾತನೂರು ಪೋಲಿಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪಟೇಲ್ ಕಾಳಿರೇದೊಡ್ಡಿ ಗ್ರಾಮದಿಂದ ಕನಕಪುರ ಗ್ರಾಮಕ್ಕೆ ಸುಮಾರು 10 ಕಿ.ಮೀ. ಅಂತರ ವಿರುತ್ತದೆ. ನನ್ನನ್ನು ಹಾಗೂ ಚಾಸಾ-3 ರವರನ್ನು ಆಸ್ಪತ್ರೆಗೆ ಚಾಸಾ-1, ಚಾಸಾ-4 ರಿಂದ 7 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಚಾಕುವಿನಿಂದ ಹಲ್ಲೆಯಾಗಿರುತ್ತದೆ ಎಂದು ವೈದ್ಯರಿಗೆ ತಿಳಿಸಿರುತ್ತೇನೆ. ನಾನು ಆ ಸಮಯದಲ್ಲಿ ಕನಕಪುರ ಪುರ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ. ನಾನು ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಒಂದು ದಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಕನಕಪುರ ಸರ್ಕಾರಿ ಆಸ್ಪತ್ರೆಯ ವೈದ್ಯರ ಸಲಹೆ

ಮೇರೆಗೆ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಆಸ್ಪತ್ರೆಗೆ ಬಂದ ವ್ಯಕ್ತಿಗಳಿಗೆ ಪೋಲಿಸ್ ದೂರನ್ನು ನೀಡಲು ತಿಳಿಸಿರುವುದಿಲ್ಲ. ಘಟನೆ ನಡೆಯಿತೆಂದು ಹೇಳಲಾದ ಸಮಯದಲ್ಲಿ ಆರೋಪಿತರು ಚಾಕು, ಕಬ್ಬಿಣದ ರಾಡು ಮತ್ತು ಕಲ್ಲನ್ನು ಅಲ್ಲೆ ಬಿಸಾಡಿ ಹೋಗಿರುತ್ತಾರೆ. ಸಾಕ್ಷಿ ಮುಂದುವರೆದು ಹೊಡೆದ ಗಾಜಿನ ಚೂರು ಸಹ ಮನೆಯ ಮುಂಭಾಗದಲ್ಲಿ ಬಿದಿದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಘಟನೆ ನಡೆಯಿಂತೆಂದು ಹೇಳಲಾದ ಸಮಯದಲ್ಲಿ ನಾನು ಕಪ್ಪು ಬಣ್ಣದ ಟೀ ಶರ್ಟ್ ಧರಿಸಿರುತ್ತೇನೆ. ನಾನು ರಕ್ತದ ಕಲೆಯಾದ ಟೀ ಶರ್ಟ್ ಸಹಿತ ಕನಕಪುರ ಸರ್ಕಾರಿ ಆಸ್ಪತ್ರೆ ಹೋಗಿರುತ್ತೇನೆ. ಚಾಸಾ-3 ಸಹ ಬನಿಯಾನ್ ಸಹಿತ ಕನಕಪುರ ಸರ್ಕಾರಿ ಆಸ್ಪತ್ರೆ ಬಂದಿರುತ್ತಾನೆ. ಘಟನೆಗೆ ಉಪಯೋಗಿಸಿದ ಚಾಕು ಸಹ ರಕ್ತದ ಕಲೆಯಾಗಿರುತ್ತದೆ. ಈ ಹಂತದಲ್ಲಿ ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ MO -5 ನ್ನು ತೋರಿಸಿದ್ದು ಅದು ರಕ್ತದ ಕಲೆಯಾಗಿರುವುದಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿಯು ರಕ್ತದ ಕಲೆಯಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ನಾನು ಮತ್ತು ಚಾಸಾ-3 ಕನಕಪುರ ಸರ್ಕಾರಿ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಕೊಂಡು ವಾಪಸ್ ಮನೆಗೆ ಹೊದ ಸಂದರ್ಬದಲ್ಲಿ ಟೀ ಶರ್ಟ್ ಮತ್ತು ಚಾಸಾ-3 ರವರು ತಮ್ಮ ಬನಿಯಾನ್ ನ್ನು ಚಾಸಾ-1 ರವರ ಮನೆಯಲ್ಲಿ ತೆಗೆದಿಟ್ಟಿರುತ್ತೇವೆ. MO-1 ಮತ್ತು 2 ಪೋಲಿಸರಿಗೆ ಯಾರು ನೀಡಿದರು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ.

ದಿಃ10.05.2020 ರಂದು ನಾನು, ಚಾಸಾ-3 ಮತ್ತು ಚಾಸಾ-6 ಮದ್ಯಾಹ್ನ 3.00 ಗಂಟೆಗೆ ಸಾತನೂರು ಪೋಲಿಸ್ ಠಾಣೆಗೆ ಹೋಗಿ ಹೇಳಿಕೆಗಳನ್ನು ನೀಡಿರುತ್ತೇವೆ. ಆ ಸಮಯದಲ್ಲಿ ನಾನು ಘಟನೆ ಸಮಯದಲ್ಲಿ ಧರಿಸಿದ್ದ ಟೀ ಶರ್ಟ್ ನ್ನು ಚಾಸಾ-1 ರವರ ಮನೆಯಲ್ಲಿ ತೆಗೆದಿಟಿರುವ

ವಿಚಾರವನ್ನು ಪೋಲಿಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಗೆ MO-1 ನ್ನು ತೋರಿಸಲಾಗಿ, MO-1 ರ ಹೊಟೆಯ ಭಾಗದಲ್ಲಿ ರಕ್ತದ ಕಲೆಗಳು ಕಂಡು ಬರುತ್ತಿಲ್ಲ ಎಂದರೆ ಸರಿಯಲ್ಲ. MO-1 ನ್ನು ಕತ್ತರಿಯಿಂದ ತುಂಡರಿಸಿದಂತೆ ಕಂಡುಬರುತ್ತದೆ ಎಂದರೆ ಸರಿಯಲ್ಲ. ಚಾಸಾ-3 ರವರಿಗೆ ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿದಾಗ ಕಬ್ಬಿಣದ ರಾಡು ರಕ್ತದ ಕಲೆಯಾಗಿರುತ್ತದೆ. ಈ ಹಂತದಲ್ಲಿ ಸಾಕ್ಷಿಯು MO -6 ನ್ನು ತೋರಿಸಲಾಗಿ ಅದು ರಕ್ತದ ಕಲೆಯಾಗಿರುವುದಿಲ್ಲ ಎಂದು ಸೂಚಿಸಿದಾಗ ಸಾಕ್ಷಿಯು ಅದನ್ನು ಅಲ್ಲಗೆಳೆಯುತ್ತಾರೆ. ನಾನು ಕನಕಪುರದ ಮೇಳೆಕೋಟೆ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. MO-1, 2, 5 ರಿಂದ 7 ರ ಮೇಲೆ ರಕ್ತದ ಕಲೆಗಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಪೋಲಿಸರ ಸಮಕ್ಷಮ ಹೇಳಿಕೆ ನೀಡುವಾಗ ಆರೋಪಿತರೊಂದಿಗೆ ಬಂದಿದ್ದ ವ್ಯಕ್ತಿಗಳ ಹೆಸರನ್ನು ನೀಡಿರುವುದಿಲ್ಲ. ನಾನು ಚಾಸಾ-1 ರ ಮಾತು ಕೇಳಿ ಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-3 ರವರು 3 ನೇ ಆರೋಪಿಯೊಂದಿಗೆ ವಿವಾಹ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸಂಖ್ಯೆ 1, 2, 4 ರಿಂದ 6 ರವರು ಆರೋಪಿ ಸಂಖ್ಯೆ 3 ರವರಿಗೆ ಆದ ಅನ್ಯಾಯಾದ ವಿಚಾರ ನ್ಯಾಯಾ ಕೇಳಲು ಬಂದ ಸಮಯದಲ್ಲಿ ನಾವುಗಳು ಆರೋಪಿತರ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸಂಖ್ಯೆ 6 ರವರು ನನಗೆ ಚಾಕುವಿನಿಂದ ತಲೆಯ ಬಲಭಾಗಕ್ಕೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರೊಂದಿಗೆ ಸೇರಿಕೊಂಡು MO 1 ರಿಂದ 7 ವಸ್ತುಗಳನ್ನು ಈ ಕೇಸಿಗೆ ಸೃಷ್ಟಿ ಮಾಡಿಕೊಂಡಿರುತೇವೆ ಎಂದರೆ ಸರಿಯಲ್ಲ.

ದಿಃ10.05.2020 ರಂದು ಚಾಸಾ-4 ರವರ ವಿವಾಹವಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.